# Hosa Digantha

## Metro Stop Near the Mantri Mall

**Date: 16-03-2010 | Edition: Bangalore | Page: 13 | Source: Bureau | Clip size (cm): W: 23 H: 11**

**Clip: 1 of 1**




# ಮಂತ್ರಿ ಮಾಲ್‌ನಲ್ಲಿ ಮೆಟ್ರೋ ನಿಲ್ದಾಣ

**ಬೆಂಗಳೂರು:** ಉದ್ಯಾನ ನಗರ ಖ್ಯಾತಿಯ ಬೆಂಗಳೂರು ಐಟಿ ಬಿಟಿ, ಬಹು ಮಹಡಿಯ ಕಟ್ಟಡಗಳ ಜತೆಗೆ ಮಾಲ್‌ಗಳ ನಗರಿ ಕೂಡ ಹೌದು. ಇಂತಹ ನಗರಿಯಲ್ಲಿ ತಲೆ ಎತ್ತಲಿರುವ ದೇಶದ ಅತಿ ದೊಡ್ಡ ಮಾಲ್ ಮಂತ್ರಿ ಸ್ಕ್ವೇರ್‌ನಲ್ಲಿ ಮೆಟ್ರೋ ರೈಲ್ವೆ ನಿಲ್ದಾಣ ನಿರ್ಮಾಣವಾಗಲಿದೆ. ಸುಮಾರು 500 ಕೋಟಿ ರೂಪಾಯಿ ವೆಚ್ಚದಲ್ಲಿ 1.7 ದಶ ಲಕ್ಷ ಚದರ ಅಡಿ ವಿಸ್ತಾರದಲ್ಲಿ ತಲೆ ಎತ್ತಿರುವ ಈ ಮಾಲ್‌ನಲ್ಲಿ ಮೆಟ್ರೋ ನಿಲ್ದಾಣವನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸ್ವತಃ ಮಂತ್ರಿ ಡೆವಲಪರ್ಸ್ 30 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಿದೆ.

ಅಲ್ಲದೆ ದೇಶ ಮಾತ್ರವಲ್ಲದೆ ಅಂತರಾಷ್ಟ್ರೀಯ ಬ್ರ್ಯಾಂಡ್‌ಗಳನ್ನು ಹೊಂದಿರುವುದು ಮಾಲ್‌ನ ಹಲವು ವಿಶೇಷತೆಗಳಲ್ಲಿ ಒಂದಾಗಿದೆ. ಸುಮಾರು 10 ಸಾವಿರಕ್ಕೂ ಹೆಚ್ಚು ಅಂತಾರಾಷ್ಟ್ರೀಯ ಬ್ರ್ಯಾಂಡ್‌ಗಳು ಇಲ್ಲಿ ಲಭ್ಯ. 6 ಪ್ರಧಾನ ಮಳಿಗೆ ಸೇರಿದಂತೆ ಸ್ಟಾರ್ ಹೈಪರ್ ಮಾರುಕಟ್ಟೆ, ಲೈಫ್ ಸ್ಟೈಲ್, ಶಾಪರ್ಸ್ ಸ್ಟಾಪ್, ಪ್ಯಾಂಟಲೂನ್, ರಿಲಯನ್ಸ್ ಟ್ರೆಂಡ್ಸ್ ಮಳಿಗೆಗಳು ಇಲ್ಲುಂಟು. ಜತೆಗೆ ಸುಮಾರು 1497 ಜನರು ಕುಳಿತು ಚಲನಚಿತ್ರ ವೀಕ್ಷಿಸಲು ಅನುಕೂಲವಾಗುವಂತೆ 6 ಪರದೆಗಳುಳ್ಳ ಐಕಾನ್ಸ್ ಮಲ್ಟಿಪ್ಲೆಕ್ಸ್ ಸಹ ಇಲ್ಲಿ ತಲೆ ಎತ್ತಲಿದ್ದು, ಆಟದ ಕೇಂದ್ರವಾಗಿ ಅಮೀಬಾ ಬೌಲಿಂಗ್ ಸೆಂಟರ್ ಕೂಡಾ ಇದೆ.

ರಿಟೇಲ್ ಮಾರುಕಟ್ಟೆಯ ವಿಶೇಷ ಅನುಭವದೊಂದಿಗೆ ದೇಶ ಹಾಗೂ ಅಂತಾರಾಷ್ಟ್ರೀಯ ತಿಂಡಿ ತಿನಿಸುಗಳನ್ನು ಸವಿಯಲು 39 ರೆಸ್ಟೋರೆಂಟ್‌ಗಳಿವೆ. ಸುಮಾರು 1 ಲಕ್ಷ ಚದರ ಅಡಿಗಳಷ್ಟು ವಿಸ್ತೀರ್ಣದ ಫುಡ್ ಕೋರ್ಟ್‌ನಲ್ಲಿ 250 ಮಂದಿ ಕೂತು ಆಹಾರ ಸವಿಯಬಹುದಾಗಿದೆ.

**ಮುನ್ನೆಚ್ಚರಿಕೆ ಕ್ರಮ:** ಅತ್ಯಾಧುನಿಕ ತಂತ್ರಜ್ಞಾನಗಳನ್ನು ಬಳಸಿ ಎಲ್ಲ ರೀತಿಯ ಸುರಕ್ಷತಾ ಕ್ರಮಗಳನ್ನು ಸಹ ಕೈಗೊಳ್ಳಲಾಗಿದ್ದು, ಬೆಂಕಿ ದುರಂತ ಹಾಗೂ ಇತರೆ ಯಾವುದೇ ರೀತಿಯ ಅಪಾಯಗಳು ಆಗದಂತೆ ಎಚ್ಚರವಹಿಸಲಾಗಿದೆ. ಇತ್ತೀಚೆಗೆ ಮಾಲ್‌ಗಳಲ್ಲಿ ಸಂಭವಿಸಿದ ಕೆಲ ದುರ್ಘಟನೆಗಳನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಭದ್ರತೆಗಳನ್ನು ಕೈಗೊಳ್ಳಲಾಗಿದೆ.

**ಸುಗಮ ದಾರಿ:** ಮಾಲ್ ತಲೆ ಎತ್ತುತ್ತಿರುವುದರಿಂದ ಸಂಪಿಗೆ ರಸ್ತೆ ಬಳಿ ವಾಹನ ದಟ್ಟಣೆ ಹೆಚ್ಚಾಗುತ್ತಿದೆ ಎಂಬ ಆರೋಪಗಳು ಕೇಳಿಬರುತ್ತಿದ್ದು, ಈ ಹಿನ್ನೆಲೆಯಲ್ಲಿ ಮಾಲ್‌ನ ಆವರಣದಲ್ಲಿ ವಾಹನಗಳು ಸಂಚರಿಸಲು ವಿಶೇಷ ವ್ಯವಸ್ಥೆ ಕಲ್ಪಿಸಲಾಗಿದೆ. ಜತೆಗೆ ಮಾಲ್‌ಗೆ ಬರುವ ಗ್ರಾಹಕರಿಗೆ ಸುಗಮ ದಾರಿ ಮಾಡಿಕೊಡುವ ಸಲುವಾಗಿ ಮಾಲ್‌ನ ಹಿಂಭಾಗದಲ್ಲಿ 20 ಮೀಟರ್ ಅಗಲದ ರಸ್ತೆ ನಿರ್ಮಾಣ ಕಾರ್ಯ ನಡೆಯುತ್ತಿದ್ದು, ಇನ್ನೆರಡು ತಿಂಗಳಲ್ಲಿ ಪೂರ್ಣಗೊಳ್ಳಲಿದೆ.

**ವಾಹನ ನಿಲುಗಡೆ:** ಮಾಲ್‌ಗೆ ಆಗಮಿಸುವ ಗ್ರಾಹಕರು ತಮ್ಮ ವಾಹನಗಳನ್ನು ನಿಲ್ಲಿಸಲು ಉತ್ತಮ ವಾಹನ ನಿಲುಗಡೆ ವ್ಯವಸ್ಥೆ ಕಲ್ಪಿಸಲಾಗಿದ್ದು, ಇಲ್ಲಿ ಸುಮಾರು 1800 ಕಾರುಗಳು ಹಾಗೂ 550 ದ್ವಿಚಕ್ರವಾಹನಗಳ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ.